Azim Premji Foundation

# ಆರಂಭಿಕ ಸಾಕ್ಷರತೆಯ ಸವಾಲುಗಳು – ಒಂದು ಅಧ್ಯಯನ

ಉಮಾಶಂಕರ್ ಪೆರಿಯೋಡಿ, ಮುಖ್ಯಸ್ಥರು,

ಅಜೀಮ್ ಪ್ರೇಮ್‌ಜೀ ಫೌಂಡೇಷನ್, ಕರ್ನಾಟಕ

ಅಜೀಮ್ ಪ್ರೇಮ್‌ಜೀ ಫೌಂಡೇಷನ್‌ಗೆ ತಳಮಟ್ಟದ ಕೆಲಸದಷ್ಟೇ ಮುಖ್ಯವಾಗಿರುವುದು ಕ್ಷೇತ್ರದೊಳಗಿನ ಆಚರಣೆಗಳ ಬಗೆಗಿನ ಸಂಶೋಧನೆ. ಇದು ಫೌಂಡೇಷನ್‌ನ ಕೆಲಸಕ್ಕೂ ಗುಣಮಟ್ಟದ ಶಿಕ್ಷಣದ ಕಡೆಗಿನ ಹೆಜ್ಜೆಗಳನ್ನು ಗುರುತಿಸಿಕೊಳ್ಳುವುದಕ್ಕೂ ಅಗತ್ಯವಾದುದು. ಅಂಥ ಒಂದು ಸಂಶೋಧನೆಯನ್ನು 'ಭಾರತೀಯ ಭಾಷೆಗಳಲ್ಲಿ ಸಾಕ್ಷರತೆಯ ಬಗೆಗಿನ ಸಂಶೋಧನಾ ಯೋಜನೆ' ಹೆಸರಿನಡಿ ಟಾಟಾ ಟ್ರಸ್ಟ್ ಮತ್ತು ಅಜೀಮ್ ಪ್ರೇಮ್‌ಜೀ ವಿಶ್ವವಿದ್ಯಾನಿಲಯ ಜಂಟಿಯಾಗಿ ನಡೆಸಿವೆ. ಅಧ್ಯಯನ ಕನ್ನಡ ಮತ್ತು ಮರಾಠಿ ಭಾಷೆಗಳನ್ನು ಒಳಗೊಂಡಂತೆ ನಡೆದಿದೆ. ಆರಂಭಿಕ ಸಾಕ್ಷರತೆ ಕುರಿತ ಈ ಅಧ್ಯಯನ ವರದಿ ಇತ್ತೀಚೆಗೆ ಸಾರ್ವಜನಿಕ ಶಿಕ್ಷಣ ಇಲಾಖೆಯ ಸಮ್ಮುಖದಲ್ಲಿ ನಡೆದ ಸಭೆಯಲ್ಲಿ ಬಿಡುಗಡೆಯಾಗಿದೆ.

ಇದು ದೀರ್ಘಕಾಲಿಕ ಸಂಶೋಧನೆ. ಎರಡು ವರ್ಷಗಳ ಪೈಲಟ್ ಮತ್ತು ಮೂರುವರ್ಷಗಳ ದೀರ್ಘಕಾಲೀನ ಅಧ್ಯಯನದ (2013–16) ಫಲಿತಾಂಶವನ್ನು ವರದಿಯಲ್ಲಿ ಪ್ರಕಟಿಸಲಾಗಿದೆ. ಇದು ಹೋಲಿಕೆಯನ್ನು ಒಳಗೊಂಡ ಅಧ್ಯಯನವೂ ಹೌದು. ಅಂದರೆ ಏಕಕಾಲಕ್ಕೆ ಕರ್ನಾಟಕದ ಯಾದ್‌ಗೀರ್ ಜಿಲ್ಲೆಯ ಯಾದ್‌ಗೀರ್ ಬ್ಲಾಕಿನ 360 ವಿದ್ಯಾರ್ಥಿಗಳು ಮತ್ತು ಮಹಾರಾಷ್ಟ್ರದ ಪಾಲ್ಘರ್ ಜಿಲ್ಲೆಯ ವಾಡಾ ಬ್ಲಾಕಿನ 360 ವಿದ್ಯಾರ್ಥಿಗಳು ಈ ಅಧ್ಯಯನದ ವ್ಯಾಪ್ತಿಗೆ ಸೇರಿದ್ದಾರೆ. ಈ ಮಕ್ಕಳನ್ನು ಒಂದನೆ ತರಗತಿಯಿಂದ ಪ್ರಾರಂಭಿಸಿ ಮೂರನೆ ತರಗತಿಯವರೆಗೆ ಅನುಸರಿಸಿ ಅಧ್ಯಯನಕ್ಕೆ ದತ್ತಾಂಶಗಳನ್ನು ಸಂಗ್ರಹಿಸಿದೆ.

ಸಂಶೋಧನೆಗೆ ಆಯ್ದುಕೊಂಡ ಎರಡೂ ಪ್ರದೇಶಗಳೂ ಸಾಮಾಜಿಕವಾಗಿ ಆರ್ಥಿಕವಾಗಿ ಹಿಂದುಳಿದವು. ಆದರೆ ಯಾದ್‌ಗೀರ್ ನಿಜಾಮರ ಆಡಳಿತದಲ್ಲಿ ಮತ್ತು ಮಹಾರಾಷ್ಟ್ರ ಮುಂಬೈ ಬ್ರಿಟಿಷರ ಆಡಳಿತದಲ್ಲಿ ಇದ್ದವೆಂಬುದು ಮುಖ್ಯ ವ್ಯತ್ಯಾಸಕ್ಕೆ ಕಾರಣವಾಗಿರುವುದು ನಿಜ. ಅಂದರೆ ವಾಡಾದ ಶಾಲಾ ಶಿಕ್ಷಣದ ಚರಿತ್ರೆ ಯಾದ್‌ಗೀರ್‌ಗಿಂತ ಹಿಂದಿನದು. ಯಾದ್‌ಗೀರ್‌ನಲ್ಲಿ ನಲಿಕಲಿ ಪಠ್ಯಕ್ರಮವಿದ್ದರೆ ವಾಡಾದಲ್ಲಿ ಪಾರಂಪರಿಕ ಬಾಲಭಾರತಿ ಪಠ್ಯ ಆಧಾರಿತ ಬೋಧನಾ ಕ್ರಮವಿದೆ.

ಅಧ್ಯಯನವನ್ನು ವರ್ಷದಲ್ಲಿ ಎರಡು ಸಲ ಮೌಲ್ಯಮಾಪನವನ್ನು ನಡೆಸುವುದರ ಮೂಲಕ ಮತ್ತು ಆರಂಭಿಕ ಸಾಕ್ಷರತೆಯ ಕೌಶಲಗಳನ್ನು ಪರಿಶೀಲಿಸುವುದರ ಮೂಲಕ ಕೈಗೊಂಡಿದೆ. ಇದು ಕೆಳಸ್ತರದ ಕೌಶಲಗಳಾದ ಅಕ್ಷರಗಳ ಗುರುತಿಸುವಿಕೆ, ಪದಗಳ ಮತ್ತು ವಾಕ್ಯ ವೃಂದಗಳ ಓದುವಿಕೆಯಿಂದ ತೊಡಗಿ ಮೇಲ್‌ಸ್ತರದ ಕೌಶಲಗಳಾದ ಅರ್ಥೈಸುವಿಕೆ ಮತ್ತು ಅನುಭವಗಳ ಸಂರಚನೆಯ ವರೆಗಿನ ವ್ಯಾಪ್ತಿಯನ್ನು ಪಡೆದಿದೆ. ಗುಣಾತ್ಮಕ ಮಾಹಿತಿಗಾಗಿ ತರಗತಿ ವೀಕ್ಷಣೆ, ಶಿಕ್ಷಕರ ಸಂದರ್ಶನ, ವಿದ್ಯಾರ್ಥಿಗಳ ಸೂಕ್ಷ್ಮ ಅಧ್ಯಯನ, ಮತ್ತು ಪಠ್ಯಕ್ರಮದ ವಿಶ್ಲೇಷಣೆಯನ್ನು ಒಳಗೊಂಡಿದೆ.

ಅಧ್ಯಯನದ ಫಲಿತಾಂಶ ಈಗಾಗಲೆ ಹಲವು ವರದಿಗಳು ಬೆಳಕು ಚೆಲ್ಲಿರುವುದನ್ನೇ ಹೇಳುತ್ತದೆ. ಅಂದರೆ ಓದುವಿಕೆ ಮತ್ತು ಬರೆಯುವಿಕೆಯಲ್ಲಿ ಮಕ್ಕಳ ಪ್ರಗತಿ, ಭಾರತದ ಹಲವು ಪ್ರದೇಶ ಮತ್ತು ಸಂದರ್ಭಗಳಲ್ಲಿರುವಂತೆ ಈ ಎರಡೂ ಕಡೆಗಳಲ್ಲೂ ಹಿಂದೆಬಿದ್ದಿದೆ. ಆದರೆ ಇದರ ಕಾರಣಗಳು ಹೊಸ ಅಂಶಗಳ ಕಡೆಗೆ ಬೆಳಕು ಹರಿಸುತ್ತದೆ.

ಅಧ್ಯಯನದ ಮೂಲಕ ಕಂಡುಕೊಂಡ ಆ ಅಂಶಗಳು ಹೀಗಿವೆ:

1. ಭಾರತೀಯ ಭಾಷೆಗಳ ಅಕ್ಷರಮಾಲೆ ಅಥವ ಲಿಪಿಸಂಕೇತಗಳು ಮೂಲಾಕ್ಷರಗಳನ್ನು ಮಾತ್ರವಲ್ಲದೆ ದೀರ್ಘ ಮತ್ತು ಒತ್ತಕ್ಷರಗಳನ್ನು ಒಳಗೊಂಡು ಸಂಕೀರ್ಣವಾಗಿವೆ. ಅವುಗಳ ಪರಿಚಯ, ನಿಯಮಗಳ ಮೇಲೆ ಹತೋಟಿ ಮತ್ತು ಬಳಕೆಗೆ ಮಕ್ಕಳು ಹೆಚ್ಚಿನ ಸಮಯ ತೆಗೆದುಕೊಳ್ಳುತ್ತಾರೆ.

   ಮಕ್ಕಳು ಅಕ್ಷರಮಾಲೆಯ ಮೇಲೆ ಹತೋಟಿಪಡೆಯುವುದಕ್ಕೆ 4 ಮತ್ತು 5ನೇ ತರಗತಿಗಳಲ್ಲೂ ಪರಿಶ್ರಮಪಡುತ್ತಿರುತ್ತಾರೆ. ಇದು ಕರ್ನಾಟಕ ಮತ್ತು ಮಹಾರಾಷ್ಟ್ರದ ಎರಡೂ ಕ್ಷೇತ್ರಗಳಿಗೂ ಅನ್ವಯವಾಗುವ ಸಾಮಾನ್ಯ ಅಂಶವಾಗಿದೆ.

2. ಭಾಷಾ ತರಗತಿಯ ಬಹುಪಾಲು ಸಮಯವು ಕೆಳಸ್ತರದ ಕೌಶಲಗಳ ಗಳಿಕೆಗೆ ವಿನಿಯೋಗವಾಗುತ್ತವೆ. ಉದಾಹರಣೆಗೆ ಅಕ್ಷರಗಳನ್ನು ಓದುವುದು ಮತ್ತು ಬರೆಯಲು ಕಲಿಯುವುದು, ಪದಗಳನ್ನು ಓದುವುದು ಮತ್ತು ಬರೆಯುವುದು, ವಾಕ್ಯಗಳನ್ನು ಓದುವುದು ಮತ್ತು ಬರೆಯುವುದು, ಹೀಗೆ. ಈ ಅಭ್ಯಾಸಗಳಲ್ಲಿ ಬೌದ್ಧಿಕ ತೊಡಗುವಿಕೆಯ ಪ್ರಕ್ರಿಯೆಗಳು ಬಹಳ ಕಡಿಮೆಯಿವೆ. ಬದಲಾಗಿ ಸಂಬಂಧವಿಲ್ಲದ, ಅರ್ಥವಿಲ್ಲದ ಮತ್ತು ಬಾಯಿಪಾಠದ ವಿಧಾನವೇ ಇದರಲ್ಲಿ ಪ್ರಧಾನವಾಗಿದೆ. ಇಂಥ ಪರಿಸ್ಥಿತಿ ಎರಡೂ ಬ್ಲಾಕುಗಳಿಗೂ ಸಾಮಾನ್ಯವಾಗಿದೆ.

   ಮೂಲಾಕ್ಷರದಿಂದ ಮುಂದುವರೆದು, ಗುಣಿತಾಕ್ಷರ ಮತ್ತು ಒತ್ತಕ್ಷರಗಳನ್ನು ಬರೆಯುವ, ಓದುವ ಅಭ್ಯಾಸ 3ನೇ ತರಗತಿಗೆ ಬಂದಾಗಲೂ ಆಗಿರುವುದಿಲ್ಲ. ಯಾದ್‌ಗೀರ್ ಸಂದರ್ಭದಲ್ಲಿ ಶೇ. 70 ಮಕ್ಕಳು ಎರಡು ಮೂರು ಅಕ್ಷರಗಳ ಸರಳ ಪದಗಳಿಂದ ಕೂಡಿದ 30 ಪದಗಳಿರುವ ವಾಕ್ಯವೃಂದವನ್ನು ಓದಲು ಆಗದವರಿದ್ದಾರೆ. ಸ್ವಲ್ಪ ಕಷ್ಟದ ಪದಗಳಿದ್ದರೆ ಶೇ. 90 ಮಕ್ಕಳು ಓದಲಾಗದೆ ಹೋಗುತ್ತಾರೆ. ಇದು ವಾಡಾದಲ್ಲಿ ಸ್ವಲ್ಪ ಮಾತ್ರ ಉತ್ತಮವಿರುವಂತೆ ಕಾಣುತ್ತದೆ. ಶೇ. 27 ಮಕ್ಕಳು ಸರಳ ಪದಗಳ ವಾಕ್ಯವೃಂದವನ್ನು ಓದಲಾರರಾದರೆ, ಶೇ. 75 ಮಕ್ಕಳು ಸ್ವಲ್ಪ ಕಷ್ಟದ ಪದಗಳಿರುವ ವಾಕ್ಯವೃಂದಗಳನ್ನು ಓದಲಾರದವರಾಗಿದ್ದಾರೆ.

   ಪಠ್ಯಕ್ರಮದ ದೋಷವಾಗಿ ಲಿಪಿಯ ಸಂಕೇತವನ್ನೇ ಕಲಿಯುವ ಪರಿಪಾಠವಿರುವುದು, ಅದನ್ನು ಧ್ವನಿಯೊಂದಿಗೆ ಜೋಡಿಸುವ ಅಭ್ಯಾಸದ ಕಡೆಗೆ ನಿರ್ಲಕ್ಷ್ಯವಿರುವುದು, ಬಾಯಿಪಾಠ ಮತ್ತು ಅರ್ಥಹೀನ ಪುನರಾವರ್ತನೆಯಿರುವುದು, ಪದದ ಅರ್ಥದೊಂದಿಗೆ ಅಕ್ಷರಗಳನ್ನು ಗುಣಿಸಿ ಹೊಸಪದಗಳನ್ನು ಬರೆಯುವ ಪರಿಪಾಠ ಇಲ್ಲದಿರುವುದು, ಗುಣಿತಾಕ್ಷರಗಳ ಕಲಿಕೆ ಓದುವುದರೊಂದಿಗೆ ಜೋಡಣೆಯಾಗದಿರುವುದು, ಮಕ್ಕಳಿಗೆ ಅವರ ಮಟ್ಟಕ್ಕೆ ಸರಿಯಾದ ಓದುವ ಸಾಮಗ್ರಿಯನ್ನು ಪೂರೈಸದಿರುವುದು, ಇತ್ಯಾದಿಗಳನ್ನು ಗುರುತಿಸಬಹುದು. ಅಂದರೆ ಈ ಪ್ರಕ್ರಿಯೆಯಲ್ಲಿ ಅರ್ಥದ ಅಂಶ ಗೌಣವಾಗಿರುವುದು ಕಾಣುತ್ತದೆ.

3. ಆರಂಭಿಕ ಸಾಕ್ಷರತೆಯಲ್ಲಿ ಅರ್ಥೈಸುವಿಕೆ ಮತ್ತು ಅನುಭವದ ಸಂರಚನೆ ನಿರ್ಲಕ್ಷಿತ ಅಂಶಗಳಾಗಿರುವುದು ಕಾಣುತ್ತವೆ. ಮೇಲ್‌ಸ್ತರದ ಕೌಶಲಗಳಾದ ಈ ಅಂಶಗಳ ಪರಿಸ್ಥಿತಿಯು ಕೆಳಸ್ತರದ ಕೌಶಲಗಳ ಪರಿಸ್ಥಿತಿಗಿಂತಲೂ ಕೆಟ್ಟದ್ದಾಗಿದೆ. ಅಂದರೆ, ಓದಿದ್ದರ ಅರ್ಥವನ್ನು ಗ್ರಹಿಸುವುದು, ಚಿತ್ರವನ್ನು ನೋಡಿ ಅದರ ಬಗೆಗೆ ಅರ್ಥಮಾಡಿಕೊಂಡದ್ದನ್ನು ಹೇಳುವುದು ಅಥವ ಬರೆಯುವುದು, ಇತ್ಯಾದಿಗಳು ಕಷ್ಟಕರವಾಗಿದೆ. ಅಕ್ಷರಗಳನ್ನು, ಪದಗಳನ್ನು ಓದಬಲ್ಲ ಮಕ್ಕಳೂ ಅದರ ಅರ್ಥವನ್ನು ಬರೆಯುವುದಕ್ಕೆ ಇಲ್ಲ ಬಾಯಲ್ಲಿ ಹೇಳುವುದಕ್ಕೆ ವಿಫಲರಾಗುತ್ತಾರೆ. ಈ ಪ್ರಮಾಣ ಯಾದ್‌ಗಿರಿಯಲ್ಲಿ ಶೇ. 60 ಇದ್ದರೆ, ವಾಡಾದಲ್ಲಿ ಶೇ. 30 ಇದೆ.

   ಉದಾಹರಣೆಗೆ ಪದಗಳ ಅರ್ಥವನ್ನು ಗ್ರಹಿಸಿ ಹೇಳುವುದು; ಕಥೆ/ಪಠ್ಯದ ಘಟನೆ, ಸನ್ನಿವೇಶಗಳನ್ನು ತಿಳಿದು ಮಾತಾಡುವುದು; ಅರ್ಥವನ್ನು ಊಹಿಸುವುದು, ಓದಿದ ಪಠ್ಯದಿಂದ ನೇರ ವಿಷಯವನ್ನು ತಿಳಿದುಕೊಳ್ಳುವುದು, ವಿಷಯಗಳನ್ನು ಸಂಬಂಧೀಕರಿಸುವುದು, ಇತ್ಯಾದಿ.

4. ಈ ಅಧ್ಯಯನದಲ್ಲಿ ತೌಲನಿಕವಾಗಿ ಪಠ್ಯಕ್ರಮದ ಕಷ್ಟಗಳೂ ಇರುವುದು ಕಂಡುಬಂದಿದೆ. ನಲಿಕಲಿ ವಿಧಾನದಲ್ಲಿ ಭಾಷೆ ಮತ್ತು ಸಾಕ್ಷರತೆಯ ಕಲಿಕೆಗೆ ಅಡಚಣೆಯಾಗಿದೆ ಎಂದು ಅಧ್ಯಯನವು ಕಂಡುಕೊಂಡಿದೆ. ಪಾರಂಪರಿಕ ಪಠ್ಯಬೋಧನೆಗಿಂತ ಇದು ಹೆಚ್ಚಿನಮಟ್ಟದಲ್ಲಿದೆ ಎನ್ನುತ್ತದೆ. ಇದು ಶಿಕ್ಷಕರು ಒಂದೇ ಮಟ್ಟದ ಪ್ರಾವೀಣ್ಯತೆಯಲ್ಲಿ ಇದ್ದಾಗಲೂ ಆಗಿರುವ ವ್ಯತ್ಯಾಸ.

   ಈ ವ್ಯತ್ಯಾಸ ನಲಿಕಲಿಯ ಬಹುವರ್ಗ ಬಹುಸ್ತರದ ಕಲಿಕಾ ಕ್ರಮದ ಕಾರಣವಾಗಿದೆಯೆಂದು ಕಂಡುಬರುತ್ತದೆ. ಮುಖ್ಯವಾಗಿ ಗುಂಪಿನಲ್ಲಿ ನಡೆಯುವ ಕಲಿಕಾ ಪ್ರಕ್ರಿಯೆಯಿಂದಾಗಿ ಒಟ್ಟು ತರಗತಿಗೆ ಶಿಕ್ಷಕರು ಗಮನನೀಡದೆ ಹೋಗುತ್ತಾರೆ. ಪಠ್ಯಕ್ರಮದ ಪದಪುಂಜಗಳು ಮಕ್ಕಳ ದಿನನಿತ್ಯದ ಪಾರಿಭಾಷೆಗಿಂತ ಭಿನ್ನವಾಗಿ ಅಪರಿಚಿತವಾಗಿರುತ್ತವೆ. ಓದುವ

ಪರಿಕರಗಳು ಮಕ್ಕಳ ಕೆಳಸ್ತರದ ಕೌಶಲಗಳಿಗೆ ಗಮನಕೊಡುತ್ತವೆ. ಚಟುವಟಿಕೆಗಳಲ್ಲಿ ಮಕ್ಕಳ ಮೌಖಿಕ ಅಭಿವ್ಯಕ್ತಿಗೆ ಅವಕಾಶಗಳು ಕಮ್ಮಿಯಾಗುತ್ತವೆ, ಅರ್ಥಪೂರ್ಣ ಸಮಗ್ರ ತರಗತಿ ಪ್ರಕ್ರಿಯೆಗಳ ಕೊರತೆಯೂ ಇದೆ.

5. ಕೊನೆಯ ಮುಖ್ಯ ವಿಷಯವೆಂದರೆ, ಪಠ್ಯಕ್ರಮಕ್ಕೆ ಅನುಗುಣವಾಗಿ ಭಾಷೆ ಮತ್ತು ಆರಂಭಿಕ ಸಾಕ್ಷರತೆಯನ್ನು ಸೂಕ್ತವಾಗಿ ಕಲಿಸುವ ತರಬೇತಿಗಳು ಶಿಕ್ಷಕರಿಗೆ ಇಲ್ಲದಿರುವ ಕೊರತೆ.

ಇಂಥಹ ಪರಿಸ್ಥಿತಿಯಲ್ಲಿ ಏನು ಮಾಡಬಹುದು ಎಂಬುದಕ್ಕೆ ಈ ಅಧ್ಯಯನ ಸಲಹೆಗಳನ್ನು ನೀಡಿದೆ.

1. ಓದುವ ಮತ್ತು ಬರೆಯುವ ಅಗತ್ಯವನ್ನು ಮಕ್ಕಳ ಮನಸ್ಸಿನಲ್ಲಿ, ವಿಶೇಷವಾಗಿ ಮೊದಲ ತಲೆಮಾರಿನ ಮಕ್ಕಳ ಮನಸ್ಸಿನಲ್ಲಿ ಮೂಡಿಸುವ ಅಗತ್ಯವಿದೆ.
2. ಅರ್ಥಗ್ರಹಣೆಯೇ ಪ್ರಧಾನವಾಗಿ ಭಾಷೆ ಮತ್ತು ಸಾಕ್ಷರತೆಯ ತರಗತಿಗಳಲ್ಲಿ ನಡೆಯುವಂತಾಗಬೇಕು.
3. ತರಗತಿಯಲ್ಲಿ ಮಕ್ಕಳ ಸಾಹಿತ್ಯ ವಿಫುಲವಾಗಿರಬೇಕು ಮತ್ತು ಗಟ್ಟಿಯಾಗಿ ಓದುವ ಪರಿಪಾಠಗಳು ಇರಬೇಕು.
4. ಮಕ್ಕಳು ಪದಗಳೊಂದಿಗೆ ಆಟವಾಡುವ ಚಟುವಟಿಕೆಗಳಿರಬೇಕು. ಆ ಮೂಲಕ ಅವರು ಪದ ಮತ್ತು ಸ್ವರದ ಸಂಬಂಧವನ್ನು ಗುರುತಿಸುವುದಾಗಬೇಕು.
5. ಅರ್ಥಗ್ರಹಿಕೆ ಮತ್ತು ಅನುಭವವನ್ನು ಕಟ್ಟಿಕೊಳ್ಳುವ ಮತ್ತು ಅಭಿವ್ಯಕ್ತಿಸುವ ಚಟುವಟಿಕೆಗಳು ಇರಬೇಕು.
6. ಕೇಂದ್ರ ಸರಕಾರದ 'ಓದುವ ಭಾರತ ಮಹಾನ್ ಭಾರತ' ಕಾರ್ಯಕ್ರಮದಲ್ಲಿ ವಿವರಿಸಿರುವಂತೆ ದಿನಕ್ಕೆ ಕನಿಷ್ಠ ಎರಡೂವರೆ ತಾಸುಗಳ ಅವಧಿ ಭಾಷೆ ಮತ್ತು ಸಾಕ್ಷರತೆಯ ಅಭ್ಯಾಸಕ್ಕೆ ಮೀಸಲಾಗಬೇಕು.
7. ಆರಂಭಿಕ ಸಾಕ್ಷರತೆಯನ್ನು ಕೈಗೊಳ್ಳುವ ನಿಟ್ಟಿನಲ್ಲಿ ಶಿಕ್ಷಕರಿಗೆ ಸೂಕ್ತ ತರಬೇತಿಗಳು ಬೇಕು.
8. ಕೆಲವು ವಿದೇಶೀ ಶಿಕ್ಷಣ ಕ್ರಮದಲ್ಲಿ ಕಂಡುಬರುವಂಥ ಸೂಕ್ತ ಮಧ್ಯವರ್ತನೆಗಳನ್ನು ಕೈಗೊಳ್ಳುವುದರ ಬಗೆಗೂ ಚಿಂತನೆ ನಡೆಸಬೇಕು. ಉದಾಹರಣೆಗೆ ಅಲ್ಲಿ, ನಿಗದಿತ ಕಲಿಕಾಮಟ್ಟಕ್ಕೆ ಅನುಗುಣವಾಗಿ ಪ್ರಗತಿ ಸಾಧಿಸದಿರುವ ಮಕ್ಕಳಿಗೆ ವಿಶೇಷ ಮಧ್ಯವರ್ತನೆಗಳಿವೆ. ಉದಾಹರಣೆಗೆ ಒಟ್ಟು ತರಗತಿಗೆ ಒಂದು ಮಧ್ಯವರ್ತನೆ ಇದ್ದರೆ, ಪ್ರಗತಿಯಲ್ಲಿ ಸುಮಾರಾಗಿ ಹಿಂದುಳಿದವರಿಗೆ ಗುಂಪುಗಳಲ್ಲಿ ಮತ್ತು ಹೆಚ್ಚು ಹಿಂದುಳಿದವರಿಗೆ ವೈಯಕ್ತಿಕವಾಗಿ ಬೆಂಬಲಿಸಬೇಕಾಗುತ್ತದೆ.

ಹೀಗೆ ಪ್ರಸ್ತುತ ಅಧ್ಯಯನವು ಆರಂಭಿಕ ಸಾಕ್ಷರತೆಯ ಪರಿಕಲ್ಪನೆ ಮತ್ತು ಅದರಲ್ಲಿರುವ ಸವಾಲುಗಳ ಬಗೆಗೆ ಬೆಳಕು ಚೆಲ್ಲುತ್ತದೆ. ಅದರಲ್ಲೂ ವಿಶೇಷವಾಗಿ ಭಾರತೀಯ ಭಾಷೆಗಳ ಲಿಪಿಯ ಸಂಕೀರ್ಣತೆಯಿಂದ ಮಗುವಿಗೆ ಆಗುವ ಅಡಚಣೆ, ಪಠ್ಯಕ್ರಮದ ದೋಷಗಳು, ಭಾಷಾ ಕಲಿಕೆಯಲ್ಲಿ ಕಂಠಪಾಠದ ಮಿತಿಗಳು, ಅರ್ಥಕ್ಕಿಂತ ಯಾಂತ್ರಿಕ ಓದಿಗೆ ಮಹತ್ವಕೊಡುವುದು, ಮೇಲ್‌ಸ್ತರದ ಕೌಶಲಗಳ ನಿರ್ಲಕ್ಷ್ಯ, ಇತ್ಯಾದಿಗಳು ಪ್ರಮುಖವಾಗಿರುವುದು ಕಂಡುಬರುತ್ತದೆ.

(ಇದು ಶೈಲಜಾ ಮೆನನ್ ಮತ್ತು ರಾಮಚಂದರ್ ಕೃಷ್ಣಮೂರ್ತಿ, ಅಜೀಮ್ ಪ್ರೇಮ್‌ಜೀ ವಿಶ್ವವಿದ್ಯಾನಿಲಯ ಅವರು ನಡೆಸಿದ ಸಂಶೋಧನಾ ವರದಿಯ ಅಂಶಗಳನ್ನು ಆಧರಿಸಿದ ಲೇಖನ)